**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

***ಎಸ್.ಸಿ.* 116/2020**

| | | |
|---|---|---|
| ಸಾಕ್ಷಿದಾರರ ಹೆಸರು | : **ಸುಹಾಸ್** | *ಪ್ರಮಾಣ ಮಾಡಿದ ದಿನಾಂಕ:* |
| ತಂದೆ ಹೆಸರು | : **ಪುಟ್ಟಲಿಂಗ** | **17.01.2023** |
| ವಯಸ್ಸು | : **29** ವರ್ಷ | |
| ವೃತ್ತಿ | : **ಖಾಸಗಿ ಕೆಲಸ** | **ಪಿಡಬ್ಲ್ಯೂ : 08** |
| ವಾಸ ಸ್ಥಳ | : **ಬೆಂಗಳೂರು** | **ಸಿಡಬ್ಲ್ಯೂ : 11** |

***ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:***

**ನ್ಯಾಯಾಲಯದೆದುರು ಹಾಜರಿರುವ 3ನೇ ಆರೋಪಿಯನ್ನು ನಾನು ನೋಡಿಲ್ಲ. ಚಾಸಾ-8 ಗೊತ್ತಿಲ್ಲ. ನನ್ನ ರುಜು ನೋಡಿದರೆ ಗುರುತಿಸುತ್ತೇನೆ. ಈಗ 4 ವರ್ಷದ ಹಿಂದೆ ಮೈಸೂರಿನ ನಜರಾಬಾದ್ ಪೊಲೀಸ ಠಾಣೆಯಲ್ಲಿ ಪೊಲೀಸರು ನನ್ನ ಕಡೆಯಿಂದ ರುಜು ಪಡೆದಿದ್ದರು. ಮಹಜರ ಮತ್ತು ನೋಟೀಸ್‌ಗಳಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಮಹಜರನುನ ನಿಪಿ-9 ಎಂದು, ಸಾಕ್ಷಿ ರುಜುವನ್ನು ನಿಪಿ-9(ಎ) ಎಂದು, ನೋಟೀಸ್‌ನ್ನು ನಿಪಿ-10 ಎಂದು, ಸಾಕ್ಷಿ ರುಜುವನುನ ನಿಪಿ-10(ಎ) ಎಂದು ಗುರುತಿಸಿದೆ. ಮಹಜರನಲ್ಲಿ ಏನು ಬರೆದಿದೆ ಅಂತ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಆ ದಿನ ಪೊಲೀಸರು ಒಂದು ಚೀಟಿಯ ಮೇಲೆ ಕೂಡ ನನ್ನ ರುಜು ಪಡೆದಿದ್ದರು. ಮೊಹರು ಮಾಡಿದ ಚಾಕುವಿನ ಮೇಲೆ ಇರುವ ಚೀಟಿಯಲ್ಲಿ ನನ್ನ ರುಜು ಇರುತ್ತದೆ. ಆದರೆ ಚಾಕುವನ್ನು ನಾನು ನೋಡಿರುವುದಿಲ್ಲ.**

***(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)***

***ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-***

**2. ದಿನಾಂಕ 15.06.2019ರಂದು ನಿಪಿ-10ರಂತೆ ನೋಟೀಸು ಕೊಟ್ಟು ಠಾಣೆಗೆ ಕರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಠಾಣೆಯಲ್ಲಿ 3ನೇ ಆರೋಪಿ ಹಾಜರಿದ್ದು, ಇತ ನಮ್ಮನ್ನು ಮತ್ತು ಪೊಲೀಸರನ್ನು ಮಹಜರ ಸ್ಥಳಕ್ಕೆ ಕರೆದುಕೊಂಡು ಹೋಗಿ ಚಾಕುವನ್ನು ಹಾಜರುಪಡಿಸಿದ್ದ ಎಂದರೆ ಸರಿಯಲ್ಲ. ಮಹಜರನ ಮಾಹಿತಿಗಳನ್ನು ತಿಳಿದು ಸ್ಥಳದಲ್ಲಿ ರುಜು ಮಾಡಿದ್ದೆ ಎನ್ನುವುದು ಸರಿಯಲ್ಲ. ಈಗ 3ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**17.01.2023.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.